**Publication:** Vijayakarnataka
**Date:** 07/08/2016
**Edition:** Bengaluru
**Page No:** 2
**Headline:** Presidency school students win 'IT Wiz'

# ಪ್ರೆಸಿಡೆನ್ಸಿ ಶಾಲೆಗೆ ಪ್ರಶಸ್ತಿ

**ಬೆಂಗಳೂರು:** ವೈಯಾಲಿಕಾವಲ್‌ನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಟಿಸಿಎಸ್ ಗುರುವಾರ ಆಯೋಜಿಸಿದ್ದ ಅಂತರ್ ಶಾಲಾ ಕ್ವಿಜ್ ಸ್ಪರ್ಧೆಯಲ್ಲಿ ಪ್ರೆಸಿಡೆನ್ಸಿ ಶಾಲೆ ವಿದ್ಯಾರ್ಥಿಗಳು ವಿಜೇತರಾಗಿದ್ದಾರೆ.

ಮಾಹಿತಿ ತಂತ್ರಜ್ಞಾನ ವಿಷಯ ಕುರಿತು 8ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ 1 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಮೊದಲ 5 ಸುತ್ತಿನ ಬಳಿಕ ಪ್ರೆಸಿಡೆನ್ಸಿ ಶಾಲೆಯ ಸಮರ್ಥ ಡಿ ರಾಜು ಮತ್ತು ಕೆ.ಎಸ್ ಸುಕೇತ್ ಪ್ರಶಸ್ತಿ ಗಳಿಸಿದ್ದಾರೆ.

ರನ್ನರ್ ಅಪ್ ಆಗಿರುವ ಕುಮಾರನ್ಸ್ ಶಾಲೆಯ ವಲ್ಲಭ ರಮಾಕಾಂತ ಮತ್ತು ಮೋಹಿತ್ ದೋಶಿ ಐಪ್ಯಾಡ್ ಮಿನಿ ಗೆದ್ದಿದ್ದಾರೆ. ಇದೇ ವೇಳೆ ಪ್ರಶಸ್ತಿ ಸುತ್ತಿಗೆ ಆಯ್ಕೆಯಾಗಿದ್ದ ಎಲ್ಲಾ 6 ಜನರಿಗೂ ಆಕರ್ಷಕ ಬಹುಮಾನಗಳನ್ನು ನೀಡಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಟಾಪ್ 6 ತಂಡಗಳು ಪ್ರಾದೇಶಿಕ ಮಟ್ಟದಲ್ಲಿ ನಡೆಯಲಿರುವ ಫೈನಲ್‌ಗೆ ಆಯ್ಕೆಯಾಗಿದ್ದಾರೆ. ನಗರ ಸಂಚಾರ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಆರ್.ಹಿತೇಂದ್ರ ಪ್ರಶಸ್ತಿ ವಿತರಿಸಿದರು.